# ನಿಮ್ಮೊಡನೆ

## ಸಂತೋಷದ ಸೂಚ್ಯಂಕ: ಪ್ರಜೆಗಳೇ ವಿಧಾತರು!

ವರ್ಷದಿಂದ ವರ್ಷಕ್ಕೆ ‘ಸಾಮಾಜಿಕ ಮಾಲಿನ್ಯ’ ಹೆಚ್ಚಾಗುತ್ತಿದೆ ಹಾಗೂ ಸಾಮಾಜಿಕ ಪರಿಸರ ಕಲುಷಿತಗೊಳ್ಳುವುದಕ್ಕೆ ರಾಜಕೀಯ ವಿದ್ಯಮಾನಗಳು ಪ್ರಮುಖ ಕಾರಣವಾಗಿವೆ. ಪ್ರಜಾಪ್ರಭುತ್ವದಲ್ಲಿ ಸಂತೋಷದ ಹಣೆಬರಹವನ್ನು ಬರೆಯುವ ನಿಟ್ಟಿನಲ್ಲಿ ಪ್ರಜೆಗಳೇ ವಿಧಾತರು.

ಆಯಾ ಪ್ರದೇಶದಲ್ಲಿನ ತಂಪು ಹಾಗೂ ಉಷ್ಣ ಹವಾಮಾನ ಜನರ ಸಂತೋಷದ ಮೇಲೆ ಪರಿಣಾಮ ಬೀರುತ್ತದೆ ಎಂದು ‘ವಿಶ್ವ ಸಂತೋಷ ಸೂಚ್ಯಂಕ 2023’ ವರದಿ ಹೇಳುತ್ತಿದೆ. ಈ ವರದಿ, ಹವಾಮಾನ ಬದಲಾವಣೆಗೂ ಜನರ ಜೀವನಮಟ್ಟಕ್ಕೂ ಇರುವ ಸಂಬಂಧಕ್ಕೆ ಎಳೆದಿರುವ ಅಡಿಗೆರೆಯಾಗಿದೆ. ತಂಪು ಪ್ರದೇಶದಲ್ಲಿ ವಾಸಿಸುವವರು ಭೂಮಿಯ ಮೇಲಿನ ಅತ್ಯಂತ ಹರ್ಷಚಿತ್ತ ಜನರು ಎಂದು ಹೇಳಿರುವ ವರದಿ, ತನ್ನ ಅಧ್ಯಯನಕ್ಕೆ ಉದಾಹರಣೆಯಾಗಿ ಸೂಚ್ಯಂಕದಲ್ಲಿ ಫಿನ್ಲೆಂಡ್‌ಗೆ ಮೊದಲ ಸ್ಥಾನ ನೀಡಿದೆ; ಆಫ್ಘಾನಿಸ್ತಾನವನ್ನು ವಿಶ್ವದ ಅತ್ಯಂತ ಅಸಂತುಷ್ಟ ನಾಗರಿಕರ ದೇಶ ಎಂದು ಗುರ್ತಿಸಿದೆ. ವಿಶ್ವಸಂಸ್ಥೆಯ ‘ಸುಸ್ಥಿರ ಅಭಿವೃದ್ಧಿ ಪರಿಹಾರಗಳ ಜಾಲ’ (ಯು.ಎನ್. ಸಸ್ಟೈನಬಲ್ ಡೆವಲಪ್‌ಮೆಂಟ್ ಸಲ್ಯೂಷನ್ಸ್ ನೆಟ್‌ವರ್ಕ್) ಈ ಅಧ್ಯಯನ ವರದಿಯನ್ನು ಸಿದ್ಧಪಡಿಸಿದೆ.

ಫಿನ್ಲೆಂಡ್ ಸತತ ಆರನೇ ಬಾರಿ ಈ ಸ್ಥಾನ ಪಡೆದುಕೊಂಡಿದೆ. 136 ದೇಶಗಳ ಪಟ್ಟಿಯಲ್ಲಿ ಭಾರತಕ್ಕೆ 125ನೇ ಸ್ಥಾನ ದೊರೆತಿದೆ. ಆಶ್ಚರ್ಯದ ಸಂಗತಿಯೆಂದರೆ, ನೆರೆಯ ದೇಶ ಪಾಕಿಸ್ತಾನ ಸಂತೋಷದ ಸೂಚ್ಯಂಕದಲ್ಲಿ ಭಾರತಕ್ಕಿಂತ 30 ಸ್ಥಾನ ಮೇಲಿದೆ. ರಷ್ಯಾದ ದಾಳಿಯಿಂದ ತಲ್ಲಣಿಸುತ್ತಿರುವ ಉಕ್ರೇನ್ ಕೂಡ ಸಂತೋಷದ ನಕ್ಷೆಯಲ್ಲಿ ಉತ್ತಮ ಸ್ಥಾನದಲ್ಲಿದೆ. ಈ ಸೂಚ್ಯಂಕಗಳು ‘ಸಂತೋಷದ ಮಾನದಂಡ’ದ ಮೇಲೆಯೇ ಅನುಮಾನ ಮೂಡಿಸುವಂತಿವೆ. ಜನಜೀವನದಲ್ಲಿ ಹಾಸುಹೊಕ್ಕಾಗಿರಬಹುದಾದ ಸಂತೋಷವನ್ನು ಗುರ್ತಿಸಲು – ನೈಜ ತಲಾದಾಯ, ಸಾಮಾಜಿಕ ಬೆಂಬಲ, ಆರೋಗ್ಯಕರ ಜೀವನಮಟ್ಟ, ಜೀವನದ ಆಯ್ಕೆಗಳ ನಿಟ್ಟಿನಲ್ಲಿ ಇರುವ ಸ್ವಾತಂತ್ರ್ಯ, ಉದಾರ ಮನೋಭಾವ ಹಾಗೂ ಭ್ರಷ್ಟಾಚಾರದ ಬಗೆಗಿನ ಪರಿಕಲ್ಪನೆಗಳನ್ನು ಮಾನದಂಡಗಳನ್ನಾಗಿ ಬಳಸಲಾಗಿದೆ. ಆದರೆ, ಯಾವ ಮಾನದಂಡಗಳನ್ನು ಅನುಸರಿಸಿದರೂ ಸಂತೋಷದ ಗುಣಮಟ್ಟವನ್ನು ನಿರ್ದಿಷ್ಟವಾಗಿ ಗುರ್ತಿಸುವುದು ಕಷ್ಟ. ಬಹಳಷ್ಟು ಸಂದರ್ಭಗಳಲ್ಲಿ ಸಂತೋಷ ಎನ್ನುವುದು ವ್ಯಕ್ತಿಗತವಾದ ಭಾವವಾಗಿರುತ್ತದೆ ಹಾಗೂ ಅದು ಮಾನಸಿಕ ಸ್ಥಿತಿ ಆಗಿರುತ್ತದೆ. ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂಗತಿಗಳು ಕೂಡ ನಮ್ಮ ಸಂತೋಷದ ಗುಣಮಟ್ಟವನ್ನು ನಿರ್ಧರಿಸಬಲ್ಲವು. ಹಾಗಾಗಿ, ಈಗ ಹೊರಬಿದ್ದಿರುವ ‘ಸಂತೋಷದ ಸೂಚ್ಯಂಕ’ದಂಥ ವರದಿಗಳನ್ನು ಪರಿಪೂರ್ಣ ಅಥವಾ ಅಂತಿಮ ಎಂದು ಭಾವಿಸಬೇಕಾಗಿಲ್ಲ. ಭಾರತಕ್ಕಿಂತಲೂ ಪಾಕಿಸ್ತಾನದಲ್ಲಿನ ನಾಗರಿಕರು ಹೆಚ್ಚು ಸಂತುಷ್ಟ ಜೀವನ ನಡೆಸುತ್ತಿದ್ದಾರೆ ಎಂದು ಹೇಳಲೂ ಸಾಧ್ಯವಿಲ್ಲ. ಆದರೆ, ಇಂಥ ವರದಿಗಳು ನಮ್ಮನ್ನು ಇತರರು ಹೇಗೆ ನೋಡುತ್ತಿದ್ದಾರೆ ಎನ್ನುವ ಹೊಳಹನ್ನು ಕಟ್ಟಿಕೊಡುತ್ತವೆ; ನಮ್ಮ ಸಾಮಾಜಿಕ ಸಂದರ್ಭವನ್ನು ವಿಮರ್ಶಿಸಿಕೊಳ್ಳಲು ಅಗತ್ಯವಾದ ಒಳನೋಟಗಳನ್ನು ಕಟ್ಟಿಕೊಡುತ್ತವೆ; ವ್ಯಕ್ತಿ ಹಾಗೂ ಸಮಷ್ಟಿ ನೆಲೆಯಲ್ಲಿ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲು ಹಾಗೂ ಈಗಾಗಲೇ ಚಾಲ್ತಿಯಲ್ಲಿರುವ ಕಾರ್ಯಕ್ರಮಗಳನ್ನು ಉತ್ತಮಪಡಿಸಲು ಪ್ರೇರಣೆ ಒದಗಿಸುತ್ತವೆ. ಆ ಕಾರಣದಿಂದಲೇ ಇಂಥ ವರದಿಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಮಹತ್ವ ಪಡೆಯುತ್ತವೆ, ಚರ್ಚೆಗೊಳಗಾಗುತ್ತವೆ.

ಹವಾಮಾನ ಬದಲಾವಣೆ ಜನರ ನೆಮ್ಮದಿಯ ಮೇಲೆ ಪರಿಣಾಮ ಬೀರುತ್ತದೆ ಎಂದು ಹೇಳುವುದಕ್ಕೆ ವಿಶೇಷ ಅಧ್ಯಯನಗಳ ಅಗತ್ಯವೇನೂ ಇಲ್ಲ. ಕರ್ನಾಟಕವನ್ನೇ ಉದಾಹರಣೆಯನ್ನಾಗಿ ತೆಗೆದುಕೊಂಡರೆ, ರಾಜ್ಯದ ಪರಿಸರ ನೀತಿಗೂ ಇತ್ತೀಚಿನ ವರ್ಷಗಳಲ್ಲಿನ ಪ್ರಾಕೃತಿಕ ವೈಪರೀತ್ಯಗಳಿಗೂ ಸಂಬಂಧ ಇದ್ದೇ ಇದೆ. ಪ್ರತಿ ಬೇಸಗೆಯೂ ಪರಿಸರದಲ್ಲಿನ ಏರುಪೇರಿಗೆ ಕನ್ನಡಿಯಾಗಿದೆ. ಪಶ್ಚಿಮ ಘಟ್ಟಗಳ ಸಂರಕ್ಷಣೆಯ ಕುರಿತಂತೆ ಸ್ಪಷ್ಟವಾದ ನೀತಿಯೊಂದಕ್ಕೆ ಬದ್ಧವಾಗುವುದು ನಮಗೆ ಸಾಧ್ಯವಾಗಿಲ್ಲ. ಹೊಳೆಗಳಿಗೆ ನಂಜು ಸೇರಿಸುವುದನ್ನು ನಿಯಂತ್ರಿಸುವುದು ಸಾಧ್ಯವಾಗುತ್ತಿಲ್ಲ. ಕೆರೆಗಳಿಗೆ ನೀರು ತುಂಬಿಸುವುದರ ಬದಲು ಹೂಳು ತುಂಬಿಸುತ್ತಿದ್ದೇವೆ. ನೀರಿನ ಸಮಸ್ಯೆಗಳಿಗೆ ಸ್ಥಳೀಯವಾಗಿ ಪರಿಹಾರ ಕಂಡುಕೊಳ್ಳುವುದು ಆಡಳಿತ ನಡೆಸುವವರಿಗೆ ‘ಲಾಭದಾಯಕ’ ಎನ್ನಿಸುತ್ತಿಲ್ಲ. ಅರಣ್ಯದ ಸವಕಳಿ ಮತ್ತು ಗಿಡಮರಗಳ ಹನನ ನಿರಂತರವಾಗಿ ನಡೆಯುತ್ತಲೇ ಇದೆ. ಜನಸಾಮಾನ್ಯರ ಮಾತಿರಲಿ, ರಾಜಕೀಯ ಪಕ್ಷಗಳ ಬಳಿಯೂ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಸ್ಪಷ್ಟ ಚಿಂತನೆಗಳಿಲ್ಲ. ಇದರ ಪರಿಣಾಮವಾಗಿಯೇ ಚಳಿ–ಮಳೆ ಮತ್ತು ಬಿಸಿಲುಗಾಲಗಳ ಚಕ್ರದಲ್ಲಿ ಪಲ್ಲಟವಾಗಿದೆ. ಮಳೆಗಾಲದಲ್ಲಿ ಗುಡ್ಡಗಳು ಕುಸಿದು, ಊರುಗಳು ಹೊಳೆಗಳ ರೂಪು ತಳೆದರೆ, ಬೇಸಿಗೆಯಲ್ಲಿ ನೀರಿನ ಸೆಲೆ ಪಾತಾಳಕ್ಕಿಳಿಯುತ್ತದೆ. ಜೀವ ತಲ್ಲಣಿಸಲು ಮತ್ತೇನು ಆಗಬೇಕು?

ಪರಿಸರವನ್ನು ಸಮಾಜದ ನೆಲೆಗಟ್ಟಿನಲ್ಲೂ ಗಮನಿಸಬೇಕು. ವರ್ಷದಿಂದ ವರ್ಷಕ್ಕೆ ‘ಸಾಮಾಜಿಕ ಮಾಲಿನ್ಯ’ವೂ ಹೆಚ್ಚಾಗುತ್ತಿರುವುದನ್ನು ಹಾಗೂ ಸಾಮಾಜಿಕ ಪರಿಸರ ಕಲುಷಿತಗೊಳ್ಳುವುದಕ್ಕೆ ರಾಜಕೀಯ ವಿದ್ಯಮಾನಗಳು ಪ್ರಮುಖ ಕಾರಣವಾಗಿರುವುದನ್ನು ಗಮನಿಸಬೇಕು.

ಚುನಾವಣೆಗೆ ಸಮಯ ನಿಗದಿಯಾಗಿರುವ ಸಂದರ್ಭ ‘ಸಾಮಾಜಿಕ ಪರಿಸರ’ದ ಬಗ್ಗೆ ನಾಗರಿಕರು ಯೋಚಿಸಲು ಪ್ರಜಾಪ್ರಭುತ್ವ ವ್ಯವಸ್ಥೆ ಕಲ್ಪಿಸಿರುವ ಅದ್ಭುತ ಅವಕಾಶ. ಈ ಅವಕಾಶ ಬಳಸಿಕೊಂಡು ‘ಸಂತೋಷದ ಸೂಚ್ಯಂಕ’ದ ಉತ್ತರದಾಯಿತ್ವಕ್ಕೆ ರಾಜಕೀಯ ವ್ಯವಸ್ಥೆ ಬದ್ಧವಾಗಿರುವಂತಹ ಪರಿಸ್ಥಿತಿಯನ್ನು ಮತದಾರರು ಸೃಷ್ಟಿಸಬೇಕು. ಪ್ರಜಾಪ್ರಭುತ್ವದಲ್ಲಿ ಸಂತೋಷದ ಹಣೆಬರಹದ ಮಟ್ಟಿಗೆ ಪ್ರಜೆಗಳೇ ವಿಧಾತರು.

■ ರಘುನಾಥ ಚ.ಹ.

